ಆ) ವಶಪಡಿಸಿಕೊಳ್ಳಲಾದ ಜಮೀನು ಎಷ್ಟು ;

ಇ) ಈ ಜಮೀನಿನಲ್ಲಿ ಬಡಾವಣೆ ನಿರ್ಮಿಸಲಾಗಿದೆಯೇ ;

ಈ) ಇಲ್ಲದಿದ್ದಲ್ಲಿ ಕಾರಣವೇನು ;

ಉ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ವಾಧೀನಪಡಿಸಿಕೊಂಡಿದ್ದ ಭೂಮಿಯನ್ನು ಕೆಐಎಡಿಬಿ ವತಿಯಿಂದ ಇತರರಿಗೆ ಮಾರಾಟ ಮಾಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಊ) ಈ ರೀತಿ ಮಾರಾಟಕ್ಕೆ ಸರಕಾರ ಅನುಮತಿ ನೀಡಿದೆಯೇ ;

ಋ) ಇದು ಸರಕಾರದ ನೀತಿಗೆ ವಿರುದ್ಧವಲ್ಲವೇ ;

ೠ) ಈ ಪ್ರಕರಣದಲ್ಲಿ ಯಾರನ್ನು ತಪ್ಪಿತಸ್ಥರೆಂದು ಗುರುತಿಸಲಾಗುವುದು ಮತ್ತು ಅವರ ವಿರುದ್ಧ ಕೈಗೊಂಡಿರುವ ಕ್ರಮವೇನು?

ಶ್ರೀ ಎನ್.ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) :

ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಅಗರ ಗ್ರಾಮದಲ್ಲಿಯ ಒಟ್ಟು 158 ಎಕರೆ 15 ಗುಂಟೆ ಜಮೀನನ್ನು ಹೊಸೂರು ರಸ್ತೆ ಸರ್ಜಾಪುರ ರಸ್ತೆ 2ನೇ ಹಂತ ಬಡಾವಣೆಗಾಗಿ ಭೂಸ್ವಾಧೀನ ಪಡೆಯಲು ಪ್ರಾಧಿಕಾರದಿಂದ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ : ಬಿಡಿಎ:ಎಸ್ಎಎಲ್ಎಒ, ದಿನಾಂಕ : 24-7-91 ಮತ್ತು ಅಂತಿಮ ಅಧಿಸೂಚನೆ ಸಂಖ್ಯೆ : ಯುಡಿಡಿ 716 ಎಂಎನ್ಎಕ್ಸ್ 94 ದಿನಾಂಕ : 24-5-96 ರಂದು ಹೊರಡಿಸಲಾಗಿತ್ತು. ಈ ಜಮೀನುಗಳ ಭೂಸ್ವಾಧೀನವನ್ನು ಪ್ರಾಧಿಕಾರವು ಪಡೆದಿರುವುದಿಲ್ಲ.

ಏತನ್ಮಧ್ಯೆ ಕೆಐಎಡಿಬಿಯು ಕೂಡ ಈ ಜಮೀನುಗಳಿಗೆ ಅಂತಿಮ ಅಧಿಸೂಚನೆಯನ್ನು ದಿನಾಂಕ : 15-1-2001ರಂದು ಹೊರಡಿಸಿತ್ತು. ತದನಂತರ ಬೆಳವಣಿಗೆಯ ಹಿನ್ನೆಲೆಯಲ್ಲಿ ಕೆಐಎಡಿಬಿಯ ಪರವಾಗಿ ಸದರಿ ಜಮೀನನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ : ಯುಡಿಡಿ 64 ಎಂಎನ್ಎಕ್ಸ್ 2004, ದಿನಾಂಕ : 10-02-2004 ರನ್ವಯದ ಮೇರೆಗೆ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾಯಿತು. ಪ್ರಸ್ತುತ ಜಮೀನು ಕೆಐಎಡಿಬಿಯ ವಶದಲ್ಲಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ (ಅ)ಕ್ಕೆ ನೀಡಿರುವ ಉತ್ತರ ಇದಕ್ಕೂ ಅನ್ವಯವಾಗುತ್ತದೆ.

ಉ) ಪ್ರಸ್ತುತ ಈ ಜಮೀನು ಈಗ ಕೆಐಎಡಿಬಿ ಯ ವಶದಲ್ಲಿದ್ದು ಸದರಿ ಜಮೀನನ್ನು ಯಾರಿಗೆ ಹಂಚಿಕೆ ಮಾಡಬೇಕೆಂಬುವ ಬಗ್ಗೆ ಇನ್ನೂ ತೀರ್ಮಾನವಾಗಿರುವುದಿಲ್ಲ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ಋ) ಪ್ರಶ್ನೆ ಉದ್ಭವಿಸುವುದಿಲ್ಲ.

ೠ) ಪ್ರಶ್ನೆ ಉದ್ಭವಿಸುವುದಿಲ್ಲ.

283(413) ಶ್ರೀ ಮೋಹನರ ಪಿ.ಸಿ. ಮತ್ತು (ಚಿಕ್ಕಪೇಟೆ),ಆರ್. ಅಶೋಕ್ (ಉತ್ತರಹಳ್ಳಿ) ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಬಳಿ ಕೆಲಾಗ್ರಾಮ ನಿರ್ಮಿಸಲು ಉದ್ದೇಶಿಸಲಾಗಿದೆಯೇ ಹಾಗೂ ಕಲಾಗ್ರಾಮ ನಿರ್ಮಾಣದ, ಉದ್ದೇಶವೇನು ;

ಆ) ಯೋಜನೆ ಅಂದಾಜು ವೆಚ್ಚ ಎಷ್ಟು ;

ಇ) ಯೋಜನೆಗೆ ವಶಪಡಿಸಿಕೊಳ್ಳಲಾಗಿರುವ ಜಮೀನು ಎಷ್ಟು ;

ಈ) ಕೇಂದ್ರ ಸರ್ಕಾರ ಯೋಜನೆಗೆ ನೀಡಿರುವ ಅನುದಾನದ ಮೊತ್ತ ಎಷ್ಟು ;

ಉ) ಕಲಾಗ್ರಾಮ ನಿರ್ಮಾಣವು ಯಾವ ಹಂತದಲ್ಲಿದೆ ;

ಊ) ಪೂರ್ಣಗೊಳ್ಳುವುದು ಯಾವಾಗ ?

ಶ್ರೀ ಎನ್.ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಕರ್ನಾಟಕ ಸಮಗ್ರ ಸಾಹಿತ್ಯ ಕಲೆ, ಜಾನಪ, ಸಂಸ್ಕೃತಿಯನ್ನು ಒಂದೆಡೆ ಪ್ರದರ್ಶಿಸುವುದಾಗಿದೆ.

ಆ) ಕಲಾಗ್ರಾಮದ ಸಮಗ್ರ ನಕಾಶೆಯನ್ನಷ್ಟೆ ಸಿದ್ದಪಡಿಸಲಾಗಿದ್ದು ಹಂತ ಹಂತವಾಗಿ ಕಾಮಗಾರಿಗಳನ್ನು ಮಾಡಲಾಗುತ್ತಿದ್ದು, ಸಮಗ್ರ ಅಂದಾಜು ವೆಚ್ಚ ಸಿದ್ದಪಡಿಸಬೇಕಾಗಿದೆ.

ಇ) 20 ಎಕರೆ

ಈ) ಇಲ್ಲ

ಉ) ನಾಲ್ಕು ಕುಟೀರಗಳು ಸಿದ್ದವಾಗಿವೆ.

ರಸ್ತೆ ನಿರ್ಮಾಣ ಆಗಿದೆ.

ಕೆರೆ ನಿರ್ಮಾಣ ಆಗುತ್ತಿದೆ.

ಬಯಲು ರಂಗಮಂದಿರ ನಿರ್ಮಾಣಕ್ಕೆಗೆತ್ತಿಕೊಳ್ಳಲಾಗುತ್ತಿದೆ.

ತಂತಿ ಬೇಲಿ ನಿರ್ಮಾಣವಾಗಿದೆ. ಕೊಳವೆ ಬಾವಿ ತೋಡಿಸಲಾಗಿದೆ.

ಊ) ಅವಧಿ ನಿಗದಿಪಡಿಸಿರುವುದಿಲ್ಲ.

284(414) ಶ್ರೀ.ಮೋಹನ್ ಪಿ.ಸಿ(ಚಿಕ್ಕಪೇಟೆ) ಮತ್ತು ಶ್ರೀ ಆರ್. ಅಶೋಕ್(ಉತ್ತರ ಹಳ್ಳಿ) ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿರುವ ಸ್ಯಾಮೀಸ್ ಡ್ರೀಮ್‌ಲ್ಯಾಂಡ್‌ಲ್ಲಿ ಪ್ಯಾರಾಶೂಟ್ ಅಪಘಾತ ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈ ಅಪಘಾತದಲ್ಲಿ ಗಾಯ ಗೊಂಡವರ ಸಂಖ್ಯೆ ಎಷ್ಟು , ಇವರಿಗೆ ಆಗಿರುವ ಗಾಯಗಳ ಬಗ್ಗೆ ಪೂರ್ಣ ಮಾಹಿತಿ ನೀಡುವುದು;

ಇ) ಅಪಘಾತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಮಗ್ರ ತನಿಖೆ ನಡೆಸಲಾಗಿದೆಯೇ ;

ಈ) ಹಾಗಿದ್ದಲ್ಲಿ, ಅಪಘಾತಕ್ಕೆ ಕಾರಣಗಳೇನು ;

ಉ) ಅಪಘಾತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಎನ್.ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಬಂದಿದೆ

ಆ) ಈ ಅಪಘಾತದಲ್ಲಿ ಒಟ್ಟು 11 ಜನ ಘಾಯಗೊಂಡಿದ್ದಾರೆ. ಗಾಯಗೊಂಡವರ ಪೂರ್ಣ ಮಾಹಿತಿ ಹಾಗೂ ಗಾಯದ ಪ್ರಯಾಣ ಈ ಕೆಳಕಂಡಂತೆ ನಮೂದಿಸಿದೆ.

1) ಶ್ರೀ. ಹೆಚ್.ಡಿ. ಪಾಶ್ವನಾಥ್ ಸದರಿಯವರಿಗೆ ಎಡಮೊಣ ಕೈ, ಎಡ ಪಕ್ಕ ಬೆನ್ನು ಮೂಳೆಗೆ ಪೆಟ್ಟಾಗಿರುತ್ತದೆ.